ಒ ಎಸ್ ನಂಃ **33/2021** ಪಿ.ಡಬ್ಲ್ಯುಃ **1**

<u>ದಿನಾಂಕಃ 19-01-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

<u>ಪಾಟೀ ಸವಾಲುಃ ಹೆಚ್ ಬಿ ವಕೀಲರಿಂದಃ-</u>

ರುದ್ರಮ್ಮ ನನ್ನ ತಾಯಿ. ನನ್ನ ತಾಯಿ ರುದ್ರಮ್ಮನ ತಂದೆ ಹೆಸರು ನಂಜಪ್ಪ ಆಗಿರುತ್ತದೆ. ನಂಜಪ್ಪನ ತಂದೆ ಹೆಸರು ಸಣ್ಣ ಈರಪ್ಪ. ಸಣ್ಣ ಈರಪ್ಪನಿಗೆ 4 ಜನ ಮಕ್ಕಳು, ಅವರೆಂದರೆ ನಂಜಪ್ಪ, ಗಂಗಪ್ಪ, ನಂಜಮ್ಮ, ಗಂಗಮ್ಮ ಆಗಿರುತ್ತಾರೆ. ಗಂಗಪ್ಪನಿಗೆ 5 ಜನ ಗಂಡು ಮಕ್ಕಳು , 2 ಹೆಣ್ಣು ಮಕ್ಕಳು. ಅವರೆಂದರೆ ಓಂಕಾರಪ್ಪ, ನಾಗರಾಜಪ್ಪ, ಓಂಕಾರಮ್ಮ, ಜಯಮ್ಮ, ವೀರಭದ್ರಪ್ಪ, ನಿಂಗಪ್ಪ ಹಾಗೂ ಕುಮಾರಪ್ಪ ಆಗಿರುತ್ತಾರೆ. ವೀರಭದ್ರಪ್ಪ ಗಂಗಪ್ಪನ ಮಗ. ಗಂಗಮ್ಮನಿಗೆ 3 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮ್ಕಕಳು. ಅವರೆಂದರೆ ಸಿದ್ರಾಮಪ್ಪ, ಈರಪ್ಪ, ಗೌರಮ್ಮ, ಚಂದ್ರಪ್ಪ , ಗಂಗಮ್ಮ ಆಗಿರುತ್ತಾರೆ. ಕಲ್ಯಾಣಮ್ಮ ಎಂಬುವವರು ಯಾರೆಂದು ಗೊತ್ತಿಲ್ಲ. ಸಂಬಂದದಲ್ಲಿ ಅ ಹೆಸರಿನವರು ಇಲ್ಲ.

ದಾವಾಅಸ್ತಿಗಳು ನಮ್ಮ ಅಜ್ಜ ನಂಜಪ್ಪ ಅಂದರೆ ತಾಯಿ ರುದ್ರಮ್ಮನ ತಂದೆ ನಂಜಪ್ಪನವರ ಆಸ್ತಿಗಳಾಗಿರುತ್ತವೆ. ಪ್ರತಿವಾದಿ 1 ನನ್ನ ಅಜ್ಜನ ತಂಗಿಯಾದ ನಂಜಮ್ಮನ ಮೊಮ್ಮಗ. 1 ನೇ ಪ್ರತಿವಾದಿಯವರ ತಾಯಿಯ ಹೆಸರು ಕಾಳಮ್ಮ ಆಗಿರುತ್ತದೆ. ಸದರಿ ಕಾಳಮ್ಮ ನಂಜಮ್ಮನ ಮಗಳಾಗಿದ್ದಾರೆ. ಕಾಳಮ್ಮನಿಗೆ 5 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು. ಅದರಲ್ಲಿ ಪ್ರತಿವಾದಿ 1 ಮತ್ತು 2 ರವರು, ಮಲ್ಲಿಕಾರ್ಜುನ ಆಗಿರುತ್ತಾರೆ. ಉಳಿದ ಇಬ್ಬರ ಹೆಸರು ನೆನಪಿಲ್ಲ. ಮಗಳ ಹೆಸರು ಸರೋಜಮ್ಮ ಆಗಿರುತ್ತದೆ. 2017 ರಲ್ಲಿ ವಸಂತಕುಮಾರ ರವರನ್ನು ಗೌರಮ್ಮ ಎಂಬುವವರು ದತ್ತಕಕ್ಕೆ ತೆಗೆದುಕೊಂಡಿದ್ದಾರೆ. ಸದರಿ ಗೌರಮ್ಮ ನಂಜಪ್ಪನ ಮಗ ಈಶ್ವರಪ್ಪನವರ ಪತ್ನಿಯಾಗಿದ್ದಾರೆ. ನಂಜಪ್ಪನಿಗೆ ಮೂರು ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು, ಒಂದು ಗಂಡು ಮಗ. ಉಳಿದ ಹೆಣ್ಣು ಮಕ್ಕಳೆಂದರೆ ರುದ್ರಮ್ಮ ಅಂದರೆ ನನ್ನ ತಾಯಿ ಹಾಗೂ ಸಣ್ಣ ಗಂಗಮ್ಮ ನನ್ನ ಚಿಕ್ಕಮ್ಮ ಆಗಿರುತ್ತಾರೆ. ನಾನು ಸಂಬಂಧಗಳ ಬಗ್ಗೆ ವಂಶವೃಕ್ಷ ಕೊಟ್ಟಿದ್ದೇನೆ.

ದಾಖಲೆಗಳನ್ನು ನನಗೆ ಪ್ರತಿವಾದಿ 1 ರವರು ಒದಗಿಸಿದ್ದಾರೆಂದರೆ ಸರಿಯಲ್ಲ. 2017 ರಲ್ಲಿ ಗೌರಮ್ಮ ವಿಲ್ ನಾಮೆ ಮಾಡಿದ್ದಾರೆ. ಗೌರಮ್ಮ ನವರು ತೀರಿಕೊಂಡ ನಂತರ ಊರಿನಲ್ಲಿ ವಿಚಾರಿಸಿದಾಗ ಆ ವಿಚಾರ ಗೊತ್ತಾಗಿದೆ. ನಾವು ಕಛೇರಿಯಲ್ಲಿ ಅರ್ಜಿ ಸಲ್ಲಿಸಿ ಸದರಿ ವಿಲ್ ನಾಮೆ ಪ್ರತಿ ಪಡೆದಿದ್ದೇವೆ.

ಅದನ್ನು ನನಗೆ ಪ್ರತಿವಾದಿ 1 ರವರು ತೆಗೆಸಿಕೊಟ್ಟಿದ್ದಾರೆಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಅವರೇ ಕೊಡಿಸಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ 2 ರವರು ಪ್ರತಿವಾದಿ 1 ರವರ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆಂದರೆ ಸರಿ. ವಿಭಾಗ ಮಾಡಿಕೊಡಲು ನಮ್ಮ ಅಜ್ಜನಾದ ನಂಜಪ್ಪನ ಬಳಿ ಕೇಳಿದ್ದೆ. ಅವರು ತೀರಿಕೊಂಡು 25 ರಿಂದ 30 ವರ್ಷಗಳಾಗಿದೆ. ಅವರು ಕೊಡುತ್ತೇನೆಂದು ಹೇಳುತ್ತಾ ಬಂದಿದ್ದರು. ಸಾಕ್ಷಿ ಮುಂದುವರೆದು ಅವರು ಬದುಕಿರುವವರೆಗೂ ಉಪಯೋಗಿಸಿಕೊಳ್ಳಲಿ ಅಂತ ಸುಮ್ಮನಿದ್ದೇವೆನ್ನುತ್ತಾರೆ. ಆ ನಂತರ ಗೌರಮ್ಮ ಅಂದರೆ ನಂಜಪ್ಪನ ಸೊಸೆಯವರ ಬಳಿ ಪಾಲಿನ ಬಗ್ಗೆ ಕೇಳಿದ್ದೇವೆ. ಭಾಗ ಕೇಳಿ ನೋಟೀಸು ಕೊಟ್ಟಿಲ್ಲ. ಗೌರಮ್ಮ ನವರು ನಾನು ಬದುಕಿರುವವರೆಗೂ ತಿನ್ನುತ್ತೇನೆ, ಆ ನಂತರ ಬಳಸಿಕೊಳ್ಳಿ ಅಂತ ಹೇಳುತ್ತಿದ್ದರು. ಈ ಬಗ್ಗೆ ದಾಖಲೆ ಇಲ್ಲ. ಆ ನಂತರ ನಾವು ಸುಮಾರು ಬಾರಿ ಪಾಲು ಕೇಳಿದ್ದೇವೆ.

ಪ್ರತಿವಾದಿಗಳ ಕುಟುಂಬದಲ್ಲಿ ಯಾವುದೇ ಸಮಾರಂಭ ಆಗಿರುವುದಿಲ್ಲ, ನಾನು ಹೋಗಿಲ್ಲ, ಆದ್ದರಿಂದ ಯಾವುದೇ ಭಾವಚಿತ್ರ ಇರುವುದಿಲ್ಲ. ಗೌರಮ್ಮನವರ ಅಂತ್ಯಕ್ರಿಯೆಯನ್ನು ಪ್ರತಿವಾದಿ 1 ರವರ ಮನೆಯಲ್ಲಿ ಮಾಡಲಾಗಿರುತ್ತದೆ. ಅವರನ್ನು ನನ್ನ ಅಜ್ಜ ನಂಜಪ್ಪನವರ ಜಮೀನಿನಲ್ಲಿ ಊಳಲಾಗಿದೆ. ಸದರಿ ಸರ್ವೆ ನಂಬರ್ ನೆನಪಿಲ್ಲ. ಸದರಿ ಸ್ವತ್ತಿಗೂ ಹಾಗೂ ಪ್ರತಿವಾದಿ 1 ರವರಿಗೂ ಸಂಬಂಧ ಇಲ್ಲ ಎಂದರೆ ಗೊತ್ತಿಲ್ಲ. ಸಾಕ್ಷಿ ಅದು ನನಗೆ ಹೇಗೆ ಹೇಳಲು ಬರುತ್ತದೆನ್ನುತ್ತಾರೆ. ಪ್ರತಿವಾದಿ 2 ರವರು ಗೌರಮ್ಮ ನವರ ಅಂತಿಮ ಕ್ರಿಯಾಧಿಗಳನ್ನು ಮಾಡಿದರೆಂದರೆ ಸರಿಯಲ್ಲ. ದಾವಾಅಸ್ತಿಗಳಿಗೂ ರುದ್ರಮ್ಮನಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ರುದ್ರಮ್ಮ ನಂಜಪ್ಪನ ಮಗಳಲ್ಲ ಎಂದರೆ ಸರಿಯಲ್ಲ. ಅ ಕಾರಣ ನನಗೆ ದಾವಾಅಸ್ತಿಗಳಲ್ಲಿ ಹಕ್ಕಿಲ್ಲ ಎಂದರೆ ಸರಿಯಲ್ಲ.

(ಪ್ರತಿವಾದಿ 1 ರವರು ಪಾಟೀ ಸವಾಲು ಇಲ್ಲ ಅಂದಿದ್ದಾರೆ)
**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸ ಇ ಎ ಒ

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.